**ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ**

**ಸಿ.ವಿ.ರಾಮನ್‌ನಗರ ಉಪ ವಿಭಾಗ, ವಾರ್ಡ್ ಸಂಖ್ಯೆ:58, ಹೊಸ ತಿಪ್ಪಸಂದ್ರ**

**ವಾರ್ಡ್ ಸಮಿತಿ ಸಭೆ, ದಿನಾಂಕ: 11-03-2022 ರ ಸಭಾ ನಡವಳಿಗಳು**

**ದಿನಾಂಕ: 11-03-2022 ರಂದು ಬೆಳಗ್ಗೆ 11.30 ಗಂಟೆಗೆ** ವಾರ್ಡ್-58 ಹೊಸ ತಿಪ್ಪಸಂದ್ರ ವ್ಯಾಪ್ತಿಯಲ್ಲಿ ವಾರ್ಡ್ ಸಮಿತಿಯ ಸಭೆಯನ್ನು ನೋಡೆಲ್ ಅಧಿಕಾರಿಯವರ ಅಧ್ಯಕ್ಷತೆಯಲ್ಲಿ ಸರ್.ಎಂ.ವಿಶ್ವೇಶ್ವರಯ್ಯ ಪಾರ್ಕ್, ಹೆಚ್.ಎ.ಎಲ್ 3ನೇ ಹಂತ ಇಲ್ಲಿ ನಡೆದ ವಾರ್ಡ್ ಸಮಿತಿ ಸಭೆಯ ನಡುವಳಿಗಳು.

**ಸಭೆಯಲ್ಲಿ ಹಾಜರಿದ್ದ ವಾರ್ಡ್ ಕಮಿಟಿ ಸದಸ್ಯರುಗಳು**

| ಕ್ರಮ ಸಂ | **ಹಾಜರಿದ್ದ ವಾರ್ಡ್ ಕಮಿಟಿ ಸದಸ್ಯರುಗಳು** | ಪ್ರವರ್ಗ |
|---|---|---|
| 1 | ಶ್ರೀ.ಹನುಮಂತಯ್ಯ | ಅಧ್ಯಕ್ಷರು ಮತ್ತು ನೋಡೆಲ್ ಅಧಿಕಾರಿರವರು |
| 2 | ಶ್ರೀ.ವಿ.ಶ್ರೀನಿವಾಸ್ | ಕಾರ್ಯದರ್ಶಿ/ಕಿರಿಯ ಅಭಿಯಂತರರು |
| 3 | ಶ್ರೀಮತಿ.ಜಯಶ್ರೀ | ಸದಸ್ಯರು |
| 4 | ಶ್ರೀ.ಬಾಲಾಜಿ. ಕೆ. ವೈದ್ಯನಾಥನ್, ರೆಸಿಡೆಂಟ್ಸ್ ಫೋರಮ್, ಎಲ್.ಐ.ಸಿ ಕಾಲೋನಿ | ಸದಸ್ಯರು |
| 5 | ಶ್ರೀ.ರವಿ | ಸದಸ್ಯರು |
| 6 | ಶ್ರೀ.ರಾಜೇಶ್ | ಸದಸ್ಯರು |
| 7 | ಶ್ರೀ.ಮುನಿರಾಜು | ಸದಸ್ಯರು |

**ಸಭೆಯಲ್ಲಿ ಹಾಜರಿದ್ದ ಅಧಿಕಾರಿ/ಸಿಬ್ಬಂಧಿಗಳು**

1) ಶ್ರೀ.ರಾಮಯ್ಯ, ಹಿರಿಯ ಆರೋಗ್ಯ ಪರಿವೀಕ್ಷಕರು
2) ಶ್ರೀ.ಹುಸೇನಪ್ಪ, ಕಿರಿಯ ಆರೋಗ್ಯ ಪರಿವೀಕ್ಷಕರು
3) ಶ್ರೀ.ದಿನಕರ್ ಘನತ್ಯಾಜ್ಯ ನಿರ್ವಹಣೆ ಮೇಲ್ವಿಚಾರಕರು
4) ಶ್ರೀ.ಲಕ್ಷ್ಮಣ್, ಮೌಲ್ಯ ಮಾಪಕರು
5) ಶ್ರೀ.ರಾಜಣ್ಣ ಕಂದಾಯ

ಸಭೆಯಲ್ಲಿ ಹಾಜರಿದ್ದ ಅಧ್ಯಕ್ಷರು ಹಾಗೂ ಎಲ್ಲಾ ಸದಸ್ಯರುಗಳನ್ನು ಕಮಿಟಿಯ ಕಾರ್ಯದರ್ಶಿಗಳು ಸಭೆಗೆ ಆಗಮಿಸಿರುವುದಕ್ಕೆ ಸ್ವಾಗತ ಕೋರಿದರು. ಸಭೆಯನ್ನು ಮುಂದುವರೆಸಲು ಸೂಚನೆ ನೀಡಿದ ನಂತರ, ಸಭೆಯನ್ನು ಆರಂಭಿಸಲಾಯಿತು.

**ಸಭೆಯಲ್ಲಿ ಚರ್ಚಿಸಿದ ವಿಷಯಗಳು:-**

| ಕ್ರ. ಸಂ | **ಮಾಹಿತಿ** | **ಕ್ರಮ ವಹಿಸಬೇಕಾಗಿರುವ ಅಧಿಕಾರಿ** |
|---|---|---|
| | **ಆರೋಗ್ಯ ಇಲಾಖೆ** | |
| 1 | ವಾರ್ಡ್ ಸಮಿತಿ ಸಭೆಯ ಅಧ್ಯಕ್ಷರು ಮಾತನಾಡಿ ವಾರ್ಡ್ ವ್ಯಾಪ್ತಿಯಲ್ಲಿ ಕೋವಿಡ್-19 ವಾಕ್ಸಿನೇಶನ್‌ನ್ನು ತೆಗೆದುಕೊಳ್ಳಲು ಸಾರ್ವಜನಿಕರಿಗೆ ಜಾಗೃತಿ ಮೂಡಿಸಿ, ಕ್ರಮ ಕೈಗೊಳ್ಳಲು ತಿಳಿಸಿದರು. | ಆರೋಗ್ಯ ವೈಧ್ಯಾಧಿಕಾರಿಗಳು |

| | | |
|---|---|---|
| | **ಘನತ್ಯಾಜ್ಯ ನಿರ್ವಹಣೆ** | |
| 1 | ವಾರ್ಡ್ ವ್ಯಾಪ್ತಿಯಲ್ಲಿ ಉತ್ಪತ್ತಿಯಾಗಿರುವ ಬ್ಲಾಕ್ ಸ್ಪಾಟ್‌ಗಳನ್ನು ತೆರವುಗೊಳಸಲು ಹಾಗೂ ಸೊಳ್ಳೆ ಔಷಧಿ ಸಿಂಪಡಿಸಲು ಶ್ರೀ.ರಾಜೇಶ್ ರವರು ಕೋರಿರುತ್ತಾರೆ.<br>ಅದರಂತೆ ಶ್ರೀ.ಹುಸೇನಪ್ಪ ಕಿರಿಯ ಆರೋಗ್ಯ ಪರಿವೀಕ್ಷಕರು ಮಾತನಾಡಿ ಸದರಿ ವಿಷಯದ ಬಗ್ಗೆ ಕ್ರಮ ಕೈಗೊಳ್ಳುವುದಾಗಿ ಹಾಗೂ ಸೊಳ್ಳ ಔಷಧಿ ಸಿಂಪಡಿಸಲು ಹಿರಿಯ ಆರೋಗ್ಯ ಪರಿವೀಕ್ಷಕರಿಗೆ ತಿಳಸುವುದಾಗಿ ತಿಳಿಸಿರುತ್ತಾರೆ. | ಕಿರಿಯ/ಹಿರಿಯ ಆರೋಗ್ಯ ಪರಿವೀಕ್ಷಕರು |
| | **ಕಾಮಗಾರಿ ಇಲಾಖೆ** | |
| 1 | ಶ್ರೀ.ಮುರಳಿ ಸಮಿತಿ ಸದಸ್ಯರು ಮಾತನಾಡಿ ಭೂಮಿರೆಡ್ಡಿ ಕಾಲೋನಿ, ರಾಮ ದೇವಸ್ಥಾನ ಸುತ್ತ-ಮುತ್ತಲಿನ ಪ್ರದೇದಶಲ್ಲಿ ಚರಂಡಿಗಳಲ್ಲಿ ಹೂಳು ತುಂಬಿದ್ದು, ಸದರಿ ಹೂಳನ್ನು ತೆರವುಗೊಳಸಲು ಕೋರಿರುತ್ತಾರೆ. ಮತ್ತು ವಾರ್ಡ್ ವ್ಯಾಪ್ತಿಯಲ್ಲಿನ ರಸ್ತೆಗಳಲ್ಲಿ ರಸ್ತೆ ಗುಂಡಿಗಳನ್ನು ಮುಚ್ಚಲು ಹಾಗೂ ರಸ್ತೆಗಳಿಗೆ ಡಾಂಬರೀಕರಣ ಮಾಡಲು ಕೋರಿರುತಾರೆ ಮತ್ತು 4ನೇ ಮುಖ್ಯರಸ್ತೆ ಹೆಚ್.ಎ.ಎಲ್ 3ನೇ ಹಂತ, ವಾರ್ಡ್ ಕಛೇರಿಯ ಹತತಿರ ಕಲ್‌ವರ್ಟ್ ಕಾಮಗಾರಿ ನಿರ್ವಹಿಸಲು ಕೋರಿರುತ್ತಾರೆ.<br>ಅದರಂತೆ ವಾರ್ಡ್ ಸಹಾಯಕ ಅಭಿಯಂತರರು ರವರು ಸದರಿ ವಿಷಯಗಳ ಬಗ್ಗೆ ಕ್ರಮ ಕೈಗೊಳ್ಳುವುದಾಗಿ ತಿಳಿಸಿರುತ್ತಾರೆ. | Assistant Engineer |
| 2 | ವಾರ್ಡ್ ವ್ಯಾಪ್ತಿಯಲ್ಲಿ ಇರುವ ಸಿ.ಸಿ.ಕ್ಯಾಮರಾಗಳನ್ನು ಅಳವಡಿಸಲು ಶ್ರೀಮತಿ ಜಯಶ್ರೀ ಸದಸ್ಯರು ಕೋರಿರುತ್ತಾರೆ. | Assistant Engineer |
| | **ಬೀದಿ ದೀಪಗಳು (Street light)** | |
| 1 | ವಾರ್ಡ್ ವ್ಯಾಪ್ತಿಯಲ್ಲಿ ಇರುವ ಬೀದಿ ದೀಪಗಳು ದುರಸ್ಥಿಯಾಗಿದ್ದು, ಇವುಗಳನ್ನು ಸರಿಪಡಿಸಲು ಶ್ರೀ.ರಾಜೇಶ್ ಸದಸ್ಯರು ಕೋರಿರುತ್ತಾರೆ. | ಸಹಾಯಕ ಅಭಿಯಂತರರು |
| 2 | ಎಲ್.ಐ.ಸಿ ಕಾಲೋನಿ ಸುತ್ತ-ಮುತ್ತ, ಹೆಚ್.ಎ.ಎಲ್ 3ನೇ ಹಂತ ಹಾಗೂ ಸುತ್ತ-ಮುತ್ತಲಿನ ಪ್ರದೇಶಗಳಲ್ಲಿ ಹೊಸದಾಗಿ ವಿದ್ಯುತ್ ಕಂಬಗಳನ್ನು ಅಳವಡಿಸಲು ಶ್ರೀ.ಬಾಲಾಜಿ ಕೆ ರವರು ತಿಳಿಸಿರುತ್ತಾರೆ.<br>ಸಂಬಂಧಪಟ್ಟ ಸಹಾಯಕ ಅಭಿಯಂತರರಿಗೆ ಮಾಹಿತಿ ಒದಗಿಸಲಾಗಿರುತ್ತದೆ. | ಸಹಾಯಕ ಅಭಿಯಂತರರು |
| | **ತೋಟಗಾರಿಕಾ ಇಲಾಖೆ** | |
| 1 | ವಾರ್ಡ್ ವ್ಯಾಪ್ತಿಯಲ್ಲಿ ಮಳೆ-ಗಾಳಯಿಂದಾಗಿ ಬಿದ್ದಿರುವ ಮರ-ಕೊಂಬೆಗಳನ್ನು ತೆರವುಗೊಳಸಲು ಶ್ರೀಮುನಿರಾಜು ರವರು ತಿಳಿಸಿರುತ್ತಾರೆ. | ಅಧೀಕ್ಷಕರು ತೋಟಗಾರಿಕಾ ಇಲಾಖೆ |
| | **Animal Husbandary** | |
| 1 | ವಾರ್ಡ್ ವ್ಯಾಪ್ತಿಯಲ್ಲಿ ಬೀದಿ ನಾಯಿಗಳ ಹಾವಳಿಯನ್ನು ತಪ್ಪಿಸಲು ಶ್ರೀಮುನಿರಾಜು ರವರು ತಿಳಿಸಿರುತ್ತಾರೆ.<br>ಅದರಂತೆ ಸಂಬಂಧಪಟ್ಟ ಅಧಿಕಾರಿಗಳ ಕ್ರಮ ವಹಿಸಲು ಸೂಚಿಸಲಾಗಿರುತ್ತದೆ. | |
| | **ಸಂಚಾರಿ ಪೊಲೀಸ್ ಠಾಣೆ,** | |
| 1 | ಶ್ರೀಮತಿ.ಜಯಶ್ರಿ ಸದಸ್ಯರು ಮಾತನಾಡಿ ಹೊಸ ತಿಪ್ಪಸಂದ್ರ ಮುಖ್ಯರಸ್ತೆಯಲ್ಲಿ ಏಕಮುಕ ಸಂಚಾರವನ್ನು ಸರಿಯಾಗಿ ಪಾಲನೆ ಮಾಡುತ್ತಿರುವುದಿಲ್ಲ, ಸುರಂಜನ್‌ದಾಸ್ ಮುಖ್ಯರಸ್ತೆಯಿಂದ ಹೊಸ ತಿಪ್ಪಸಂದ್ರ ಮುಖ್ಯರಸ್ತೆ ಕಡೆಗೆ ವಾಹನ ಸವಾರರು ಬರುವುದನ್ನು ತಡೆಗಟ್ಟಲು ಕೋರಿರುತ್ತಾರೆ.<br>ಇದರ ಬಗ್ಗೆ ಸಂಚಾರಿ ಪೊಲೀಸ್ ಠಾಣೆಯಿಂದ ಕ್ರಮ ಕೈಗೊಳ್ಳುವುದಾಗಿ ತಿಳಿಸಿರುತ್ತಾರೆ. | Traffic Police |

ಮುಂದಿನ ಸಭೆಯ ಒಳಗಾಗಿ ಸಂಬಂಧಪಟ್ಟ ಅಧಿಕಾರಿಗಳು ಕೂಡಲೇ ಕ್ರಮ ವಹಿಸಿ, ಕಾರ್ಯದರ್ಶಿ ವಾರ್ಡ್ ಸಮಿತಿ ಇವರಿಗೆ ಅನುಪಾಲನಾ ವರದಿಯನ್ನು ನೀಡುವುದು.

**ಕಾರ್ಯದರ್ಶಿಗಳು**

ಸಹಾಯಕ ಅಭಿಯಂತರರು
ವಾರ್ಡ್ ಸಂಖ್ಯೆ:58–ಹೊಸ ತಿಪ್ಪಸಂದ್ರ

ಅಧ್ಯಕ್ಷರು

ಹಿರಿಯ ಸಹಾಯಕ ನಿರ್ದೇಶಕರು(ಶಿಕ್ಷಣ)
ಹಾಗೂ ನೋಡೆಲ್ ಅಧಿಕಾರಿಗಳು
ವಾರ್ಡ್ ಸಂಖ್ಯೆ:58–ಹೊಸ ತಿಪ್ಪಸಂದ್ರ